ದಿನಾಂಕ: 22-07-2026 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಜಿ.ಎಂ. ವಕೀಲರಿಂದ.**

ನಾನು ಈಗಾಗಲೇ ನ್ಯಾಯಾಲಯಕ್ಕೆ ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಇರುತ್ತದೆ. ಆದರೆ ದಾಖಲಾತಿಗಳು ಗುರುತಿಸಿಕೊಂಡಿರುವುದಿಲ್ಲ. ಸದರಿ ದಾಖಲೆಗಳನ್ನು ಗುರುತಿಸಲು ಕೇಳಿಕೋಳ್ಳುತ್ತೇನೆ.

1. ದೃಡೀಕೃತ ನಕಲಿನ ನಿರಾಕ್ಷೇಪಣಾ ದೃಡೀಕರಣ ಪತ್ರ ದಿಃ22.05.2002 ನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು.
2. ಒಂದು ಹಣ ಸಂದಾಯ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.
3. ದೃಡೀಕೃತ ನಕಲಿನ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾತಿಗಾಗಿ ಸಲ್ಲಿಸಿದ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು.
4. 2011-12 ನೇ ಸಾಲಿನ ದೃಡೀಕೃತ ನಕಲಿನ ಡಿ.ಸಿ.ಬಿ ರಿಜಿಸ್ಟರ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು.
5. 2015-16 ನೇ ಸಾಲಿನ ದೃಡೀಕೃತ ನಕಲಿನ ಡಿ.ಸಿ.ಬಿ ರಿಜಿಸ್ಟರ್ (ಸ್ವಲ್ಪ ಶೀತಲಗೊಂಡಿರುತ್ತದೆ) ನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು.
6. 10 ತೆರಿಗೆ ಪಾವತಿದಾರರ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 6 ರಿಂದ 15 ಎಂದು ಗುರುತಿಸಲಾಯಿತು.
7. ದಿಃ25.03.2017 ರಂದು ಪುರಸಭೆ, ಸಂಡೂರುವರಿಗೆ ನೀಡಿರುವ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 16 ಎಂದು ಗುರುತಿಸಲಾಯಿತು.
8. ದಿಃ20.05.2017 ರಂದು ಪುರಸಭೆ, ಸಂಡೂರುವರಿಗೆ ನೀಡಿರುವ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 17 ಎಂದು ಗುರುತಿಸಲಾಯಿತು.
9. ದಿಃ06.01.2019 ರಂದು ಸಂಡೂರು ಪೊಲೀಸ್ ಠಾಣೆ ರವರು ನೀಡಿರುವ ಸ್ವಿಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 18 ಎಂದು ಗುರುತಿಸಲಾಯಿತು.
10. ದಿಃ19.01.2019 ರಂದು ಸಂಡೂರು ಪೊಲೀಸ್ ಠಾಣೆ ರವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 19 ಎಂದು ಗುರುತಿಸಲಾಯಿತು.

11. ದಿಃ23.01.2019 ರಂದು ಪುರಸಭೆ, ಸಂಡೂರುವರಿಗೆ ನೀಡಿರುವ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 20 ಎಂದು ಗುರುತಿಸಲಾಯಿತು.
12. 31 ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 21 ರಿಂದ 51 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಿಸಿದ ಆರು ರಸೀದಿಗಳು ಮತ್ತು 4 ಸಿಡಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 52 ರಿಂದ 61 ಎಂದು ಗುರುತಿಸಲಾಯಿತು.
13. ದಿಃ30.01.2017 ರಿಂದ 01.12.2018 ರವರೆಗಿನ ಅಕೌಂಟ್ ಸ್ಟೇಟಮೆಂಟ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ 62 ಎಂದು ಗುರುತಿಸಲಾಯಿತು.
14. 2019-20 ನೇ ಸಾಲಿನ ದೃಡೀಕೃತ ನಕಲಿ ಡಿ.ಸಿ.ಬಿ ರಿಜಿಸ್ಟರನ್ನು ಹಾಜರುಪಡಿಸಿದ್ದು ಅದನ್ನು ನಿಪಿ 63 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಗೆ ವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.